ಬೆಂಗಳೂರಿಂ ಪಶ್ಚಿಮ ವಲಯದ ಆಹಾರ ಇಲಾಖೆಯಿಂ ವಲಯಾಧಿಕಾರಿಗಳಿಂದ ಕಿರುಕುಳ ಆಗುತ್ತಿರುವ ಬಗ್ಗೆ

೨೨೪. ಶ್ರೀ ಪಿ. ಸಿ ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಬೆಂಗಳೂರು ಪಶ್ಚಿಮ ವಲಯದ ವಲಯಾಧಿಕಾರಿಗಳು ಇವರ ವ್ಯಾಪ್ತಿಗೆ ಬರುವ ಪಡಿತರ ಅಂಗಡಿಗಳು ಆಹಾರ ಸರಬರಾಜು ನಿಗಮದ ಯೂನಿಟ್‌ಗಳು ಹಾಗೂ ಸಹಕಾರ ಸಂಘಗಳಿಗೆ ಭೇಟಿ ನೀಡಿ ಅನಗತ್ಯ ಕಿರುಕುಳ ನೀಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದರೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಯಾವುದೇ ವಿಧವಾದ ಲಿಖಿತವಾದ ದೂರುಗಳು ನ್ಯಾಯಬೆಲೆ ಅಂಗಡಿಗಳು, ಸೊಸೈಟಿಗಳು, ಆಹಾರ ನಿಗಮದ ಚಿಲ್ಲರೆ ಮಳಿಗೆಗಳ ವತಿಯಿಂದ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಅಲ್ಲಿಯ ಜನ ಲಿಖಿತ ಮೂಲಕ ದೂರು ಕೊಟ್ಟಿದ್ದಾರೆ. ಅಲ್ಲಿ ಸರಿಯಾಗಿ ಪಡಿತರ ವ್ಯವಸ್ಥೆ ನಡೆಯುತ್ತಿಲ್ಲ. ಮತ್ತು ಅಧಿಕಾರಿಗಳು ಸೊಸೈಟಿಗಳಿಗೆ ಕಿರುಕುಳ ಕೊಡುತ್ತಾರೆ ಎಂದು ಹೇಳಿದ್ದಾರೆ. ದಯವಿಟ್ಟು ಇನ್ನೊಂದು ಸಲ ವಿಚಾರಣೆ ಮಾಡಿ ಅಲ್ಲಿ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಸದಸ್ಯರ ಸಲಹೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಈ ದಿಸೆಯಲ್ಲಿ ನಾನು ಹೆಜ್ಜೆ ಇಡುತ್ತೇನೆ.

ಸರ್ಕಾರಿ ವಾಹನಗಳು ಪ್ರತಿ ತಿಂಗಳು ಬಳಸುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಬಗ್ಗೆ

೧೧೦. ಶ್ರೀ ಸಾದತ್ ಅಲಿ ಖಾನ್ (ಚಿನ್ನಪಟ್ಟಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿ ತಿಂಗಳಿನಲ್ಲಿ ಬಳಸಲಾಗುತ್ತಿರುವ ಒಟ್ಟು ಪೆಟ್ರೋಲ್ ಮತ್ತು ಡೀಸೆಲ್ ವಿವರ.

ಆ) ಸರ್ಕಾರಿ ವಾಹನಗಳು ಪ್ರತಿ ತಿಂಗಳಿನಲ್ಲಿ ಬಳಸಲಾಗುತ್ತಿರುವ ಒಟ್ಟು ಪೆಟ್ರೋಲ್ ಮತ್ತು ಡೀಸೆಲ್ ಎಷ್ಟು ? (ಇಲಾಖಾವಾರು ಮಾಹಿತಿಯನ್ನು ಒದಗಿಸುವುದು).

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಎ) ಪೆಟ್ರೋಲ್—ಪ್ರತಿ ತಿಂಗಳಿಗೆ ೧೮,೪೨೩-೬೬ ಮೆಟ್ರಿಕ್ ಟನ್‌ನಷ್ಟು ಬಳಸಲಾಗುತ್ತಿದೆ.
ಬಿ) ಡೀಸೆಲ್—ಪ್ರತಿ ತಿಂಗಳಿಗೆ ೮೮,೦೪೪-೬ ಮೆಟ್ರಿಕ್ ಟನ್‌ನಷ್ಟು ಬಳಸಲಾಗುತ್ತಿದೆ.

ಆ) ಮಾಹಿತಿಯನ್ನು ಎಲ್ಲಾ ಸರ್ಕಾರಿ ಇಲಾಖೆಗಳಿಂದ ಸಂಗ್ರಹಿಸಲಾಗುತ್ತಿದೆ.

ಶ್ರೀ ಸಾದತ್ ಅಲಿ ಖಾನ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೇವಲ ಒಂದು ಇನ್‌ಫರ್ಮೇಷನ್ ಮಾತ್ರ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಪ್ರತಿ ತಿಂಗಳು ೧೮,೪೨೩.೬೬ ಮೆಟ್ರಿಕ್ ಟನ್‌ನಷ್ಟು ಪೆಟ್ರೋಲ್.೮೮,೦೪೪.೬ ಮೆಟ್ರಿಕ್‌ಟನ್‌ನಷ್ಟು ಡೀಸೆಲ್ ಬಳಕೆಯಾಗುತ್ತಿದೆ ಎಂದು ಕೊಟ್ಟಿದ್ದಾರೆ.ಅದರೆ ಡಿಪಾರ್ಟ್‌ಮೆಂಟ್‌ವೈಸ್ ಇನ್‌ಫರ್ಮೇಷನ್ ಕೇಳಿದ್ದೆ. ಅದನ್ನು ಕೊಡಲಿಲ್ಲ. ಇದರಲ್ಲಿ ಸ್ಟೇಟ್ ಗೌರ್ನಮೆಂಟ್‌ನವರು ಎಷ್ಟು ಕನ್‌ಸ್ಯೂಮ್ ಮಾಡುತ್ತಿದ್ದಾರೆ ಎನ್ನುವಷ್ಟಕ್ಕಾದರೂ ಇನ್‌ಫರ್ಮೇಷನ್‌ನನ್ನು ಪೂರ್ತಿಯಾಗಿ ಕೊಡಲಿಲ್ಲ. ಎಷ್ಟು ಪರ್ಸೆಂಟೇಜ್ ಡೀಸೆಲ್ ಮತ್ತು ಪೆಟ್ರೋಲ್‌ನ್ನು ಗೌರ್ನಮೆಂಟ್ ಡಿಪಾರ್ಟ್‌ಮೆಂಟ್ಸ್ ಕನ್‌ಸ್ಯೂಮ್ ಮಾಡುತ್ತದೆ ಎಂಬ ಇನ್‌ಫರ್ಮೇಷನ್ ಸಹ ಕೊಡಲಿಲ್ಲ. ಈ ಇನ್‌ಫರ್ಮೇಷನ್ ಕೊಡಬೇಕೆಂದು ಮಿನಿಸ್ಟರ್‌ಗೆ ಕೇಳುತ್ತೇನೆ.